

**ವೆಂಕಟೇಶ ಮಾಚಕನೂರ**

ಕಲೆ: ಗುಜ್ಜಾರ್

# ಸೂಜಿಗಣ್ಣು ಮತ್ತು ದಾರ



ಸೂಜಿ, ದಬ್ಬಣ, ಪಿನ್ನು, ಗುಂಡುಪಿನ್ನು, ಸೇಫ್ಟಿಪಿನ್ನು, ಹೇರ್‌ಪಿನ್ ಇವೆಲ್ಲ ಒಂದೇ ಕುಟುಂಬದ ಸದಸ್ಯರಿದ್ದಂತೆ. ತುಂಬಾ ಚಿಕ್ಕ ವಸ್ತುಗಳು, ಆದರೂ ಅವು ಪ್ರತಿ ಮನೆಯಲ್ಲಿ ಇರಬೇಕಾದವುಗಳು, ಇರುತ್ತವೆ. ಅವು ಒಡಹುಟ್ಟಿದವರಿದ್ದಂತೆ. ಸೂಜಿದಾರ ಇರದ ಮನೆಗಳು ಇರಲಾರವು. ದಬ್ಬಣ ಇವೆಲ್ಲವುಗಳಿಗೆ ಹಿರಿಯಣ್ಣನಿದ್ದಂತೆ. ಅದು ರೈತರ ಮನೆಗಳಲ್ಲಿ ಹೆಚ್ಚಾಗಿ ಇರುವಂಥದ್ದು. ಉಳಿದವುಗಳು ಅವರಿವರೆನ್ನದೆ ಎಲ್ಲರ ಮನೆಗಳಲ್ಲೂ ಇರುತ್ತವೆ. ಅವುಗಳಲ್ಲಿ ಕೆಲವು ಪುರುಷರಿಗೆ ಬೇಕು, ಇನ್ನು ಕೆಲವು ಸ್ತ್ರೀಯರಿಗೆ ಬೇಕು. ಪಿನ್ನು, ಗುಂಡುಪಿನ್ನು, ಕ್ಲಿಪ್‌ಗಳ ಬಳಕೆ ಕಚೇರಿಗಳಲ್ಲಿ ಹೆಚ್ಚು. ಆದರೆ ಸೂಜಿ ಮತ್ತು ದಾರ ಮಾತ್ರ ಎಲ್ಲರಿಗೂ ಬೇಕೇಬೇಕು. ಈ ಎಲ್ಲ ಚಿಕ್ಕ ವಸ್ತುಗಳ ಕೆಲಸ ಕೂಡಿಸುವುದು, ಜೋಡಿಸುವುದು, ಒಪ್ಪಗೊಳಿಸುವುದು. ಡಬ್ಬಣ ಮಾತ್ರ ರೈತರಿಗೆ ಕೃಷಿ ದವಸ ಧಾನ್ಯಗಳನ್ನು ತುಂಬಿದ ಚೀಲುಗಳನ್ನು ಹೊಲಿಯಲು ಹಾಗೂ ಇನ್ನಿತರ ಕೆಲಸಗಳಿಗೆ ಉಪಯೋಗಕ್ಕೆ ಬಂದರೆ, ಸೂಜಿ ಮತ್ತು ದಾರ ಮನೆಯೊಳಗೆ ಬಿಚ್ಚಿದ ಗುಂಡಿಗಳನ್ನು ಹಚ್ಚಲು, ಬಿಚ್ಚಿಕೊಂಡ ಹೊಲಿಗೆಗಳನ್ನು ಮತ್ತೆ ಹಾಕಲು ಅವಶ್ಯವಾಗಿ ಬೇಕಾದ ವಸ್ತು. ಉಳಿದ ಪಿನ್ನು, ಹೇರ್ ಪಿನ್ನುಗಳ ಮಹತ್ವ, ಅವಶ್ಯಕತೆಯನ್ನು ಮಹಿಳೆಯರು ಚೆನ್ನಾಗಿ ಬಲ್ಲರು. ಅಂಚೆ ಇಲಾಖೆಯ ಪಿನ್ ಕೋಡ್ ಕೂಡ ಒಂದು ರೀತಿಯಲ್ಲಿ ಇವುಗಳಂತೆ ದೇಶ ಜೋಡಣೆಯ ಕೆಲಸವನ್ನು ಮಾಡುತ್ತದೆ.

ಸೂಜಿಗಣ್ಣಿನಲ್ಲಿ ಅಥವಾ ಸೂಜಿಯ ಕಣ್ಣಿನಲ್ಲಿ ಅಥವಾ ಸೂಜಿಯ ತಲೆಯಲ್ಲಿ ದಾರ ಪೋಣಿಸುವ ಕುರಿತು ಎಲ್ಲರ ಮನೆಗಳಲ್ಲೂ ಒಂದಿಷ್ಟು ಮಾತುಕತೆಗಳು ನಡೆಯುವುದು ಉಂಟು. ಅದರಲ್ಲೂ ವಯಸ್ಸು ಸರಿಯತೊಡಗಿ, ಕಣ್ಣುಗಳು ಬಲಹೀನವಾದಂತೆ ಸೂಜಿಯಲ್ಲಿ ದಾರ ಪೋಣಿಸುವ ಕಾರ್ಯ ಚಾಲೆಂಜಿಂಗ್ ಆಗಿರುತ್ತದೆ. ಅದರಲ್ಲೂ ಮನೆ ಬಳಕೆಯ ಸೂಜಿಗಳ ಕಣ್ಣುಗಳು ತುಂಬಾ ಚಿಕ್ಕದಾಗಿದ್ದು ಬಹಳಷ್ಟು ಸತಾಯಿಸುತ್ತವೆ. ದಾರವನ್ನು ಬಾಯಿಯ ಎಂಜಲಿನಿಂದ ಚೂಪುಗೊಳಿಸಿ ಇನ್ನೇನು ಸೂಜಿಗಣ್ಣಿನಲ್ಲಿ ದಾರ ಪೋಣಿಸಿ ಆಯಿತು ಅನ್ನುವಷ್ಟರಲ್ಲಿ ದಾರ ಸೂಜಿಯ ಕಣ್ಣನ್ನು ಬಿಟ್ಟು ಹೊರ ಹೋಗಿ ನಮ್ಮನ್ನು ಅಣಕಿಸುತ್ತದೆ. ಬಹಳ ಪ್ರಯತ್ನಗಳ ನಂತರ ಯಶ ಸಾಧಿಸಬಹುದು. ಆದ್ದರಿಂದ ಒಂದು ಕಿತ್ತ ಗುಂಡಿಯನ್ನು ಹಚ್ಚಿಕೊಡು ಎಂದು ಮನೆಯಾಕೆಗೆ ಹೇಳಿದರೆ ಸೂಜಿಯಲ್ಲಿ ದಾರ ಪೋಣಿಸಿ ಕೊಡಿ ಎಂಬ ಮಾತು ಮನೆಯಾಕೆಯಿಂದ ಮೊದಲು ಬರುತ್ತದೆ. ಮನೆಗಳಲ್ಲಿ ಎಳೆಯ ವಯಸ್ಸಿನ ಕಣ್ಣುಗಳು ಇದ್ದರೆ ಸರಿ, ಸಹಾಯಕ್ಕೆ ಬರಬಹುದು. ಅಂತೆಯೇ